Sri VEERENDRA PATIL.—The hon. Member wants to know, having appointed the Pay Commission is it not the duty of the Government to implement the recommendations of the Pay Commission ? Sir, I have already made it clear in my statement what are the recommendations of the Commission which have been already implemented. Certain recommendations have got larger financial implications and we have represented the matter to the Finance Commission, and I have said in my statement that much depends upon the award that we are going to get from the Finance Commission.

Floor Crossing by Sri K. P. Chikke Gowda

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾನನ).—ನನ್ನ ಪಕ್ಷದ ಸದಸ್ಯರಾದ ಶ್ರೀಮಾ ಕೆ. ಪಿ. ಚಿಕ್ಕೇಗೌಡರು ನನಗೆ ಒಂದು ಕಾಗದ ಬರೆದಿದ್ದಾರೆ. ಸಕಲೇಶಪುರದ ಈ ಮಾನ್ಯ ಸದಸ್ಯರು ಸಾವಿರಾರು ರೂಪಾಯಿಗಳನ್ನು ಸ್ವತಂತ್ರ ಪಕ್ಷದಿಂದ ಪಡೆದು, ಸ್ವತಂತ್ರ ಪಕ್ಷದ ಚಿಹ್ನೆಯನ್ನು ಪಡೆದು, ಸ್ವತಂತ್ರ ಪಕ್ಷದ ತತ್ವಗಳನ್ನು ಒಪ್ಪಿ ಈ ಸಭೆಗೆ ಚುನಾಯಿತರಾಗಿ ಬಂದು, ಸಕಲೇಶಪುರದ ಜನತೆ ಕಾಂಗ್ರೆಸ್‌ಗೆ ವಿರೋಧವಾಗಿ ಓಟು ಕೊಟ್ಟಂಥ ಸಂದರ್ಭ ಇರುವಾಗ ಅವನ್ನು ಬಿಟ್ಟು ಬಿಟ್ಟು ಇವತ್ತು ಕಾಂಗ್ರೆಸ್‌ಗೆ ಸೇರಿಕೊಂಡಿರುವುದು ಆಶ್ಚರ್ಯವನ್ನುಂಟು ಮಾಡಿದೆ. ಇಂತಹ ಒಂದು ಮಿರ್ ಸಾದಕ್ ಕೆಲಸವನ್ನು ಅವರು ಮಾಡಿದ್ದಾರೆ. ಅನೇಕ ಕಡೆ ಮಾನ್ಯ ಮುಖ್ಯ ಮಂತ್ರಿಗಳು ಈ ಪ್ರಜಾಪ್ರಭುತ್ವ ಉಳಿಯಬೇಕಾದರೆ ಪಕ್ಷ ಬದಲಾವಣೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಅವರೇ ಇವತ್ತು ಸಕಲೇಶಪುರದ ಈ ಸದಸ್ಯರನ್ನು ತಮ್ಮ ಪಕ್ಷಕ್ಕೆ ಕರೆದು ಕೊಳ್ಳುತ್ತಾ ಇರುವಂತಹದು ಒಂದು ಬಹಳ ವಿಷಾದದ ಸಂಗತಿ ಮತ್ತು ಬಹಳ ಆಶ್ಚರ್ಯವನ್ನುಂಟು ಮಾಡುವಂತಹದು. ತಾವು ಕಾಂಗ್ರೆಸ್ ಪಕ್ಷದ ವತಿಯಿಂದ ಕೊಡುವಂತಹ ಒಂದು ಅದೇಶನನ್ನು ಪಾಲಿಸಬಾರದು, ಯಾರು ನಮ್ಮ ಪಕ್ಷದವರು ಇದ್ದರು ಅವರನ್ನು ನಾವು ಹೊರಗೆ ಹಾಕಿದ್ದೇವೆ ಎಂದು ನಾವು ಹೇಳಿದ ಮೇಲೆ ಮಾತ್ರ ತಾವು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri K. H. SRINIVASA (Sagar).—Sir, I rise to a point of Order. The hon. Member spoke about another hon. Member of this House without reference to any particular agenda before the House. I request that what all he spoke about Sri K. P. Chikke Gowda may not go on the record.

Sri H. SIDDAVEERAPPA.— Sir, I rise to a point of Order. There is another member from the Janata Paksha, whom they have taken into their fold. The only point is, I am sorry for the hon. Member who has crossed the floor. Knowing full well that some of them are crossing on over to this side, they could have advised him properly. They could have told him : 'Baba, don't come away ; we are ourselves dividing'. I think there are no *bona fides* in taking him to their Party.

Sri K. PUTTASWAMY (Minister for Law, Labour and Parliamentary Affairs).—Sir, I rise to a point of Order. Hon member Sri H. B. Jwalanaiah remarked that the hon. member Sri K. P. Chikke Gowda is a 'Mir-Sadak', which is an unparliamentary word.

Sri H. SIDDAVEERAPPA.— It is parliamentary.

Sri K. PUTTTASWAMY.— Sir, I am very sorry for the interruption of the hon. Member Sri Siddaveerappa. When he rose, I actually

resumed my seat and I heard with attention and regard whatever he said. Likewise, I expect him to do so.

The word used is unparliamentary ; it is equivalent to calling a member as a traitor.

Sri H. B. JWALANAIAH.—It is not at all unparliamentary.

Sri K. PUTTASWAMY.—It may be so in the opinion of Sri Jwalanaiah. But, he cannot be permitted to use that word with reference to an hon. Member of this House.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈಗತಾನೆ ಪಾರ್ಲಿಯಮೆಂಟರಿ ಸಚಿವರು 'ಮೀರ್ ಸಾದಕ್' ಶಬ್ದವನ್ನು ಬಳಸಿರತಕ್ಕದ್ದು ಪಾರ್ಲಿಯಮೆಂಟರಿ ಪದ್ಧತಿಗೆ ವಿರೋಧವಾದದ್ದು ಎಂಬ ಆಕ್ಷೇಪಣೆಯನ್ನು ಎತ್ತಿದ್ದಾರೆ. ಆದರೆ ಆ ಮೀರ್‌ಸಾದಕ್ ಯಾರು ? ಅವನಿಗೇಕೆ ಆ ಹೆಸರು ಬಂದಿತು ? ಅವನ ಚರಿತ್ರೆಯೇನು ? ಈ ವಿಷಯಗಳ ಬಗ್ಗೆ ಮಾನ್ಯ ಸಚಿವರು ಆ ಸಂಬಂಧಪಟ್ಟ ಕಥೆಯನ್ನು ಹೇಳುವರೇ ? ಆ ಕಥೆ ನಡೆದದ್ದೂ ಸಹ ಅವರ ಸ್ಥಳಕ್ಕೆ ಹತ್ತಿರ ಇರುವ ಶ್ರೀರಂಗಪಟ್ಟಣದಲ್ಲೇ ನಡೆದಿದೆ.....

Mr. DEPUTY SPEAKER.—I will look into the records and take necessary action.

ಶ್ರೀ ಎಸ್. ಶಿವಪ್ಪ.—ಅವರಿಗೇಕೆ ಆ ಹೆಸರು ಬಂದಿತು ? ಅದಕ್ಕೆ ಕಾರಣವೇನು ?

Sri K. H. SRINIVASA.—I want a Ruling on my Point of Order.

Mr. DEPUTY SPEAKER.—Ruling is reserved.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ದಿವಸ 4 ಗಂಟೆಗೆ ಎಲ್ಲರೂ ಮೀರ್ ಸಾದಕರಾಗುತ್ತಾರೆ. ಈಗ ಇಬ್ಬರು ಮಾನ್ಯ ಸದಸ್ಯರು ಕ್ರಿಯಾಲೋಪವನ್ನೆತ್ತಿದ್ದಾರೆ. ಅವುಗಳ ಬಗ್ಗೆ ಅಧ್ಯಕ್ಷರು ರೂಲಿಂಗನ್ನು ಕೊಡುವುದಕ್ಕೆ ಮುಂಚೆ ತಾವು ಒಂದು ಅಂಶವನ್ನು ಗಮನಿಸಬೇಕಾಗಿದೆ. ಕ್ರಿಯಾಲೋಪವನ್ನೆತ್ತಿದವರಲ್ಲಿ ಒಬ್ಬರು ತರುಣರು. ಅವರು ಆಕ್ರೋಶದಲ್ಲಿ ಅದನ್ನು ಮಂಡಿಸಿದ್ದಾರೆ. ಆದ್ದರಿಂದ ಇದರಲ್ಲೇನೂ ಕ್ರಿಯಾಲೋಪವಿಲ್ಲ ಇನ್ನು ಮಾನ್ಯ ಸಚಿವರು ಎತ್ತಿದ ಕ್ರಿಯಾಲೋಪದಲ್ಲಿ ಅವರು ಆ ಮೀರ್‌ಸಾದಕ್ ಶಬ್ದವನ್ನು ಅಧಿಕೃತ ವಿಧಿಯಿಂದ ತೆಗೆದುಹಾಕುವಂತೇನೂ ಕ್ರಿಯಾಲೋಪವನ್ನು ನೂಚಿಸಿಲ್ಲ. ಅಲ್ಲದೆ ಅವರಿಗೆ ಇಂಥ ಶಿಕ್ಷೆ ವಿಧಿಸಬೇಕೆಂತಲೂ ಹೇಳಲಿಲ್ಲ. ಕ್ರಿಯಾಲೋಪವನ್ನೆತ್ತಿ ಅನಂತರ ಕುಳಿತುಬಿಟ್ಟರು ಒಂದು ಪತ್ರವನ್ನು ಶ್ರೀಮಾನ್ ಚಿಕ್ಕೇಗೌಡರು ಅವರ ಪಕ್ಷದ ಮುಖಂಡರಾಗಿರತಕ್ಕ ಮಾನ್ಯ ಶ್ರೀ ಜ್ವಾಲನಯ್ಯನವರಿಗೆ ಬರೆದು ಕೊಂಡಿದ್ದಾರೆ. ಇದು ಈ ವಿಷಯ ಪ್ರಸ್ತಾವನೆಗೆ ಮುಖ್ಯ ಕಾರಣ. ಅವರು ಏನು ಬರೆದುಕೊಂಡಿದ್ದಾರೆಂದರೆ, ನಾನು ಸ್ವತಂತ್ರ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೇನೆಂದು. ಅದೇ ಪತ್ರ ತಮಗೂ ಬರೆದಿದ್ದಾರೆ.

2-30 P.M.

ಉಪಾಧ್ಯಕ್ಷರು.—ನನಗೆ ಬರೆದಿಲ್ಲ. ನನಗೆ ಅದು ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರಿಗೆ ಬಂದಿರಬಹುದು. ಉಪಾಧ್ಯಕ್ಷರಿಗೆ ಬಾರದೇ ಇರಬಹುದು. ನಾನು ಈ ಬಗ್ಗೆ ಒಂದು ಮಾತನ್ನು ತಮ್ಮ ಅನುಮತಿ ಪಡೆದು ಮಾನ್ಯ ಶ್ರೀ ಪುಟ್ಟಸ್ವಾಮಿಯವರಿಗೆ ಹೇಳುತ್ತೇನೆ. ಮೀರ್‌ಸಾದಕ್ ಎಂದು ನಾವು ಸಾಮಾನ್ಯವಾಗಿ ಬಳಸುವುದಿಲ್ಲ. ಆತ ಮಾಡಿದ ಕೃತಿಯಿಂದ ಇವೆಲ್ಲಾ ಬಂದಿವೆ. ಐತಿಹಾಸಿಕವಾಗಿ ಜಾಫರ್, ಜಯಚಂದ್ ಎಂದು ಇರುತ್ತಾರೆ. ಆ ತರಹ ಇದ್ದಿದೆ. ಯಾವುದೋ ಒಂದು ಉದ್ದೇಶಕ್ಕೆ ಹೋಗಿ ಅವರ ಪಕ್ಷವನ್ನು ಬದಲಾಯಿಸಿ ಬೇರೆ ಪಕ್ಷಕ್ಕೆ ಸೇರುತ್ತಾನೋ, ವಿರೋಧಿಗಳಿಗೆ ಸಹಾಯ ಮಾಡುತ್ತಾನೋ ಅಂತಹವನನ್ನು ಮೀರ್‌ಸಾದಕ್ ಎಂದು ಹೇಳಬಹುದು. ಮಾನ್ಯ ಶ್ರೀ ಶಿವಪ್ಪನವರು ಅಂತಹವನನ್ನು ರನೆಗೇಡ್ ಎಂದು ಕರೆಯುತ್ತೇವೆಂದು ಹೇಳಿದರು. ಅದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ, ಯಾರು ಕಾಂಗ್ರೆಸ್ ಪಕ್ಷದಿಂದ ವಿರೋಧಪಕ್ಷಕ್ಕೆ ಹೋಗಿ ಸೇರಿದರೆ, ಅದನ್ನು ಪ್ರಗತಿಪರ ಹೆಜ್ಜೆಯೆಂದು ನಾನು ಕರೆಯುತ್ತೇನೆ. ಕಾಂಗ್ರೆಸ್ ಪಕ್ಷದಿಂದ ಯಾರಾದರೂ ವಿರೋಧಪಕ್ಷಕ್ಕೆ ಸೇರಿದರೆ ಅದು ಡಿಫೆಕ್ಷನ್. ಆದರೂ ಅದನ್ನೂ ಸಹ ನಾನು ಸ್ವಾಗತಿಸುತ್ತೇನೆ. ಏಕೆಂದರೆ ಅದು ಪ್ರಗತಿಪರವೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಪರ್ಮಿಟ್ ಮಾಡಿದ ಮೇಲೆ ನಮಗೂ ಅವಕಾಶಕೊಡಬೇಕು.

ಶ್ರೀ ಎಸ್. ಗೋಪಾಲಗೌಡ.—ವಿರೋಧಪಕ್ಷದವನಾಗಿದ್ದು ಮತ್ತು ಚುನಾವಣೆ ಕಾಲದಲ್ಲಿ ಆಳುವ ಪಕ್ಷವನ್ನು ವಿರೋಧಿಸಿ ಗೆದ್ದಿರತಕ್ಕ ಯಾವನೇ ಆದರೂ ಅರಿಸಿಬಂದಮೇಲೆ ತನ್ನ ಸ್ವಾಭಿಮಾನಕ್ಕೆ ರಾಜೀನಾಮೆ ಕೊಡದೆ ಆಳುವ ಪಕ್ಷಕ್ಕೆ ಸೇರುವುದು ಪ್ರಗತಿಪರ ಹೆಜ್ಜೆಯಲ್ಲ. ಆಳುವ ಪಕ್ಷವನ್ನು ಬಿಟ್ಟು ವಿರೋಧ ಪಕ್ಷಕ್ಕೆ ಸೇರಿದರೆ ಅದನ್ನು ನಾನು ಪ್ರಗತಿಪರ ಹೆಜ್ಜೆಯೆಂದು ಕರೆದಿದ್ದೇನೆ. ಕಾರಣ ವೇನೆಂದರೆ, ಆಳುವ ಪಕ್ಷದವರು ವಿರೋಧಪಕ್ಷಕ್ಕೆ ಹೋಗುವುದರಲ್ಲಿ ಪ್ರಗತಿಪರ ಹೆಜ್ಜೆ ಇದೆ.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಬಹಳ ಸವಿನಯದಿಂದ ಏನೂ ಮಾತನಾಡ ಬಾರದೆಂದಿದ್ದೆ, ಮಾನ್ಯ ಶ್ರೀ ಶಿವಪ್ಪನವರಿಗೂ ಮತ್ತು ಈ ಮಾನ್ಯ ಸಭೆಗೂ ಗೊತ್ತಿದೆ. ಪಕ್ಷಾಂತರದ ಬಗ್ಗೆ ಈ ಸಭೆಯಲ್ಲಿ ಚರ್ಚೆಮಾಡಬಾರದೆಂದು ಹೇಳಿರುವುದನ್ನು ಮಾನ್ಯ ಶ್ರೀ ಶಿವಪ್ಪನವರೂ ಸಹ ಹಿಂದೆಯೇ ಒಪ್ಪಿಕೊಂಡಿದ್ದಾರೆ.....

ಶ್ರೀ ಹೆಚ್. ಸಿದ್ದವೀರಪ್ಪ.—ಯಾವಾಗ?

ಶ್ರೀ ವೀರೇಂದ್ರಪಾಟೀಲ್.—ಹಿಂದೆ ಒಪ್ಪಿಕೊಂಡಿದ್ದಾರೆ. ಬೇಕಾದರೆ ನಾನು ರಿಕಾರ್ಡ್ ತೆಗೆದು ತೋರಿಸುತ್ತೇನೆ. ಈ ಕಡೆಯಿಂದ ಆ ಕಡೆ ಹೋಗಲಿ, ಆ ಕಡೆಯಿಂದ ಈ ಕಡೆ ಬರಲಿ ಅದರ ಬಗ್ಗೆ ಚರ್ಚೆಮಾಡುವುದು ಬೇಡ. ಕಾಂಗ್ರೆಸ್ಸಿನಿಂದ ಬಂದರೆ ಪ್ರೊಗ್ರೆಸ್ಸಿವ್, ವಿರೋಧಪಕ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಹೋದರೆ ರಿ-ಆಕ್ಷನರಿ, ರಿಗ್ರೇಡ್ ಎಂದು ಏನು ಹೇಳುವುದೂ ಬೇಡ. ಇದರ ಬಗ್ಗೆ ಬಹುಶಃ 2 ಗಂಟೆ ನಾವೂ ಚರ್ಚೆಮಾಡಬಹುದು. ಈಗ ಈ ವಿಷಯವಾಗಿ ಚರ್ಚೆಮಾಡಬಾರದೆಂಬ ಪ್ರಶ್ನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಮುಖ್ಯ ಮಂತ್ರಿಗಳು ಬುದ್ಧಿವಾದ ಹೇಳುವ ಪ್ರಶ್ನೆ ಇಲ್ಲ. ಆಳುವ ಪಕ್ಷವನ್ನು ಬಿಟ್ಟು ವಿರೋಧಪಕ್ಷಕ್ಕೆ ಬರುವುದು ಪ್ರಗತಿಪರ ಚಿಹ್ನೆ. ಅದರ ವಿರುದ್ಧವಾಗಿ ಆಳುವ ಪಕ್ಷಕ್ಕೆ ಸೇರುವುದು ರಿಗ್ರೇಡ್, ಮುಟ್ಟಾಳ, ಇದನ್ನು ಹೇಳುವುದಕ್ಕೆ ನಮಗೆ ಅಧಿಕಾರವಿದೆ. ಇಷ್ಟು ಮಾತನ್ನು ನಾನು ಹೇಳುತ್ತೇನೆ.

Foreign Tours by two Ministers and the Director of Animal Husbandry

ಶ್ರೀ ಹೆಚ್. ಸಿದ್ದವೀರಪ್ಪ.—ನಾನು ಪೇಪರ್‌ನಲ್ಲಿ ಓದಿದೆ. ಇಬ್ಬರು ಮಂತ್ರಿಗಳು ಪಾಶ್ಚಿಮಾತ್ಯರಿಕ್ಕೆ ಹೋಗುತ್ತಿದ್ದಾರೆಂದು. ಅವರಿಗೆ ಬಾನ್ ವಾಯೇಜ್ ಮಾಡೋಣ ಇದಕ್ಕಾಗಿ ನಮ್ಮ ಸರ್ಕಾರಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ ಮತ್ತು ಅವರು ಏತಕ್ಕೋಸ್ಕರ ಹೋಗುತ್ತಾರೆ ಎಂದು ಹೇಳಬೇಕು. ಅವರು ಹೋಗುವುದಾದರೆ, ನಾನು ಒಂದು ಸಲಹೆ ಕೊಡುತ್ತೇನೆ. ಇನ್ನು ಒಂದೆರಡು ತಿಂಗಳುಗಳು ಸುಮ್ಮನಿದ್ದರೆ, ಎಲ್ಲರಿಗೂ ಒಂದು ಚಾನ್ಸ್ ಸಿಗುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವನದುರ್ಗ).—ಈ ತಿಂಗಳು 22ನೇ ತಾರೀಖಿನಲ್ಲಿ ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡ್ರಿಯವರು ಫ್ರಾನ್ಸಿಗೆ ಹೋಗುತ್ತಿದ್ದಾರೆ. ಅವರು ಈಗ ಒಂದು ತಿಂಗಳಿನಲ್ಲಿ ರಿಜಿಸ್ಟರ್ ಆಗುವುದರಲ್ಲಿದ್ದಾರೆ. ಅಂತಹವರಿಗೋಸ್ಕರ 10-15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಪರದೇಶಕ್ಕೆ ಕಳುಹಿಸುತ್ತಿದ್ದಾರೆ. ಅವರು ಅನಿಮಲ್ ಹಸ್ಬೆಂಡ್ರಿ ಶಾಖೆಗೆ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಹೋಗುತ್ತಿದ್ದಾರೆ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಸರ್ಕಾರದ ದುಡ್ಡನ್ನು ಇಷ್ಟು ಬೇಜವಾಬ್ದಾರಿಯಿಂದ ಖರ್ಚುಮಾಡಬಾರದೆಂಬುದಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದು ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಸಹ ನಾನು ಕಳುಹಿಸಿದ್ದೆ. ತಾವು ಅದನ್ನು ಅಡ್‌ಮಿಟ್ ಮಾಡಲಿಲ್ಲ. ಹತ್ತೂವರೆ ಗಂಟೆಗೆ ನಾನು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ತಮ್ಮ ಸೆಕ್ರೆಟೇರಿಯಟ್‌ಗೆ ಅದು ಹನ್ನೆರಡೂವರೆ ಗಂಟೆಗೆ ಮುಟ್ಟಿತು ಎಂದು ಮಾನ್ಯ ಅಧ್ಯಕ್ಷರು ಉತ್ತರ ಕೊಟ್ಟರು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿದಂಥ ಎರಡು ನೋಟೀಸುಗಳನ್ನು ಡಿಸ್ ಅಲೊ ಮಾಡಲಾಗಿದೆ.